ಪ್ರದೇಶಗಳಿಗೆ ಇದು ಅನ್ವಯಿಸುವುದಿಲ್ಲ. ಗ್ರಾಮ ಪಂಚಾಯ್ತಿ ಮತ್ತು ಟೌನು ಪಂಚಾಯ್ತಿ ವ್ಯಾಪ್ತಿಯಲ್ಲಿ ಹೆಚ್ಚುವರಿ ಬೀದಿ ದೀಪಗಳ ಅಳವಡಿಕೆ ಕಾರ್ಯವನ್ನು ಪುನರಾಂಭಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಚಿತ್ರದುರ್ಗದಿಂದ ಪ್ರಾರಂಭವಾಗುವ ರಾಷ್ಟ್ರೀಯ ಹೆದ್ದಾರಿ ನಂ. 13ನ್ನು ಅಭಿವೃದ್ಧಿ ಪಡೆಸುವುದು.

2145 - ಶ್ರೀ ಎಂ.ಎಂ. ಚಂದ್ರಪ್ಪ (ಭರಮಸಾಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಚಿತ್ರದುರ್ಗದಿಂದ ಪ್ರಾರಂಭವಾಗುವ ಸೊಲ್ಲಾಪುರದ ಮೂಲಕ ಹಾದು ಹೋಗುವ ರಸ್ತೆ ರಾಷ್ಟ್ರೀಯ ಹೆದ್ದಾರಿ ನಂ. 13ನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರದಿಂದ ಸುಮಾರು 5 ವರ್ಷಗಳಿಂದ ಮಂಜಾರಾಗಿರುವ ಹಣವನ್ನು ಈ ಕೆಲಸಕ್ಕೆ ಉಪಯೋಗಿಸಲಾಗಿದೆಯೇ ?*

ಆ) *ಹಾಗಿದ್ದಲ್ಲಿ ಇಲ್ಲಿಯವರೆಗೆ ಅಭಿವೃದ್ಧಿಯಾಗದಿರಲು ಕಾರಣಗಳೇನು ?*

ಇ) *ಈ ಹಣವನ್ನು ರಾಜ್ಯ ಸರ್ಕಾರದ ಬೇರೆ ಉದ್ದೇಶಗಳಿಗೆ ಏನಾದರೂ ಉಪಯೋಗಿಸಲಾಗಿದೆಯೇ ?*

ಈ) *ಚಿತ್ರದುರ್ಗದಿಂದ ಸುಮಾರು 40 ಕಿ.ಮೀ. ಜೋಡುರಸ್ತೆಯಾಗಿದ್ದು ಬಿಜಾಪುರದವರೆಗೆ ಇನ್ನೂ ದಿನಗಳಲ್ಲಿ ಜೋಡುರಸ್ತೆ ಮಾಡಿಸಲಾಗುವುದು ?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಕೇಂದ್ರ ಸರ್ಕಾರವು ವರ್ಷಂಪ್ರತಿ ರಾಜ್ಯದ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳಿಗೆ ನೀಡುವ ಒಟ್ಟು ಅನುದಾನದಲ್ಲಿ ಲಭ್ಯತೆಯಾದರಿಸಿ ಈ ಕಾಮಗಾರಿಗೆ ಹಣ ಉಪಯೋಗಿಸಲಾಗಿದೆ.

ಆ) ಕೇಂದ್ರ ಸರ್ಕಾರವು ನೀಡುವ ಅನುದಾನಕೆ ಅನುಗುಣವಾಗಿ ಹಂತ ಹಂತವಾಗಿ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಇ) ಇಲ್ಲ.

ಈ) ಇನ್ನು ಸುಮಾರು ಮೂರು ವರ್ಷಗಳಲ್ಲಿ (1998)ಕ್ಕೆ ದ್ವಿಪಥ ರಸ್ತೆಯಾಗಿ ಪರಿವರ್ತಿಸಲು ಯೋಜಿಸಲಾಗಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ಜಿಲ್ಲಾವಾರು ಬಿಡುಗಡೆಯಾದ ಅನುಧಾನದ ಮೊತ್ತ

2146 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?